ದಿನಾಂಕ 03.02.2017 ರ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 7ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಪಿಎಸ್ ರವರಿಂದ ಃ

11 ಅಡಿ ರಸ್ತೆಗೆ ನಾನು ಈ ಕೇಸನ್ನು ಹಾಕಿದ್ದೇನೆ. ನಾನು ರಸ್ತೆಗೆ ಮಾತ್ರ ಕೇಸನ್ನು ಹಾಕಿದ್ದು ನನ್ನ ಆಸ್ತಿಗೆ ಹಾಕಿರುವುದಿಲ್ಲ. 11 ಅಡಿ ರಸ್ತೆಯ ಎರಡು ಬದಿಗಳಲ್ಲಿ ಸಿಮೆಂಟ್‌ನ ಒಳಚರಂಡಿಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಇತರ ಎರಡು ಮನೆಗಳು ಒಂದೇ ಲೈನಿನಲ್ಲಿ ಇದೆ ಎಂದರೆ ಸರಿ. ಆದ್ದರಿಂದ ನಾನು ಪ್ರತಿವಾದಿಗಳಿಗೆ ತೊಂದರೆ ಮಾಡಲು ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 9ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಬಿಎಂಎನ್ ವಕೀಲರ ಪರವಾಗಿ ಹೆಚ್‌ಆರ್‌ಎಸ್ ವಕೀಲರು ಲಿಖಿತ ಹೇಳಿಕೆಯನ್ನು ಹಾಕಿರುವುದಿಲ್ಲ ಎಂದು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿದ್ದಾರೆ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ವಕೀಲರಾದ ಬಿಎಂಎಸ್ ವಕೀಲರು ಮತ್ತು 3ನೇ ಪ್ರತಿವಾದಿ ಪರ ವಕೀಲರಾದ ಎಂಡಿ ವಕೀಲರು ಪಾಟೀ ಸವಾಲು ಮಾಡಲು ಸಮಾಯಾವಕಾಶ ಕೋರಿದ್ದು ಮುಂದೂಡಲಾಯಿತು.

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು,
ಟಿ ನರಸೀಪುರ.